Regd No BG 155

Sri
" SATYAVADI "
— DAILY —
MYSORE 4
45 th Year

Protect the cow

18—4—1961

ಪತ್ರಿಕಾ ಕರ್ತರಿಗೆ
ಜಾಹೀರಾತಿಗಾಗಿ
* ಸತ್ಯವಾದಿ ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ಚಂದಾಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಸ್ಥಾಪಕರು— ಅರಮನೆ ಸಿರಸ್ತೇದಾರ್ ಎ. ವೆಂಕಟರಂಗಯ್ಯಂಗಾರು [ವಿಡಿ ಪ್ರತಿ 3 ಪೈ

ಪಾಕಿಸ್ತಾನಕ್ಕೆ ನಕರೆ ರಫ್ತು

18-4-61

ಭಾಂತ-ರಷ್ಯ

ಭಾರತೀಯರು ತಮ್ಮ ಕೈಗಾರಿಕೆಯನ್ನು ನಿರ್ಮಿಸಲು ಮಾಡುವ ಪ್ರಯತ್ನಕ್ಕೆ ಸೋವಿಯತ್ ಒಕ್ಕೂಟವು ಸಂಪೂರ್ಣ ಬೆಂಬಲವನ್ನು ನೀಡುತ್ತದೆ : ಔದ್ಯೋಗಿಕ ವಿಕಾಸಕ್ಕೆ ಮುಖ್ಯತಃ ಶಕ್ತಿ ಸೆಲೆಯು ಬೇಕಾಗುತ್ತದೆ ಎಂಬುದನ್ನು ಸೋವಿಯತ್ ಜನತೆಯು ತಮ್ಮ ಸ್ವಾನುಭವದಿಂದ ತಿಳಿದುಕೊಳ್ಳಬಲ್ಲರು : ಸೋವಿಯತ್ ಒಕ್ಕೂಟವು ದಕ್ಷಿಣ ಭಾರತದ ನೈವೇಲಿಯಲ್ಲಿ 250000 ಕಿಲೋವಾಟುಗಳ ಉಷ್ಣಧನ-ಶಕ್ತಿ-ಕೇಂದ್ರದ ನಿರ್ಮಾಣಕ್ಕೆ ಸಹಾಯಮಾಡುತ್ತಿದೆ ; ಅದಕ್ಕಾಗಿ ವಿಶಾಖ ಮಾರ್ಗಗಳೂ, ಹೆದ್ದಾರಿಗಳೂ ಸಂಜಾತವು ಸಂಗ್ರಹಗಳೂ ಈಗಾಗಲೇ ಶಯಾಂತಿಗಿದ್ದು, ಮುಖ್ಯ ಕಟ್ಟಡವನ್ನು ಈಗ ನಿರ್ಮಿಸಲಾಗುತ್ತಿದೆ : ಈ ವಿದ್ಯುತ್ ಕೇಂದ್ರದ ಪ್ರಥಮ ಘಟ್ಟವನ್ನು 1961 ರಲ್ಲಿ ಪೂರೈಸಲು ಯೋಜನೆ ಮಾಡಲಾಗಿದೆ.

o o

ಕಾರ್ಮಿಕ ಪತ್ರಿಕೋದ್ಯೋಗಿಗಳ ಸಮ್ಮೇಳನ

ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಎರಡನೆ ಅಧಿವೇಶನವನ್ನು ಹುಬ್ಬಳ್ಳಿಯಲ್ಲಿ ಮೇ ತಿಂಗಳಿನ 13 ಮತ್ತು 14 ನೇ ದಿನಾಂಕಗಳಲ್ಲಿ ನೆರವೇರಬೇಕೆಂದು ಕರ್ನಾಟಕ ಪತ್ರಿಕೋದ್ಯೋಗಿ ಸಂಘವು ನಿಶ್ಚಯಿಸಿದೆ.

o o

ದಂಗೆಗೋರರ ಸಂಹಾರ

ಲುವಾಂಡ 17— ಅಂಗೋಲದ ಉತ್ತರ ಭಾಗದಲ್ಲಿರುವ ಅಲ್ಪೀಯಾ ವೆಸ್ಟೋನಾ ಪ್ರಾಂತದಲ್ಲಿ ಪೋರ್ಚುಗೀಸು ಸೈನಿಕರು 29 ಮಂದಿ ದಂಗೆಗೋರರನ್ನು ಸಂಹರಿಸಿದ್ದಾರೆ.

ಛತ್ರಪತಿ ಶಿವಾಜಿ

ಶಿವನೇರಿ (ಪೂನೆ) 17— ಛತ್ರಪತಿ ಶಿವಾಜಿ ಮಹಾರಾಜರು 333 ವರ್ಷಗಳ ಹಿಂದೆ ಜನಿಸಿದ ಸ್ಥಳವಾದ ಶಿವನೇರಿಯಲ್ಲಿ ಶಿವಾಜಿ ಜಯಂತಿಯನ್ನು ಇಂದು ವಿಜೃಂಭಣೆಯಿಂದ ಆಚರಿಸಲಾಯಿತು.

ಗಾಂಧೀಜಿ ಪ್ರತಿಮೆ

ನವದೆಹಲಿ 17— ಮುಖ್ಯವಾದ ರೈಲ್ವೆ ನಿಲ್ದಾಣಗಳಲ್ಲಿ ಮತ್ತು ನಿಲ್ದಾಣದ ಅವರಣಗಳಲ್ಲಿ ಮಹಾತ್ಮಾ ಗಾಂಧಿಯವರ ಅವ್ಯತಶಿಲೆ ಪ್ರತಿಮೆಗಳನ್ನು ಸ್ಥಾಪಿಸುವ ಉದ್ದೇಶ ಸರಕಾರದ ಪರಿಶೀಲನೆಯಲ್ಲಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಪರಿಹಾರ ಕೊಡಬೇಕು

ಬೆಂಗಳೂರು 17— ಗ್ರಾಮಾಧಿಕಾರಿಗಳ ಸಮ್ಮೇಳನದಲ್ಲಿ, ಗ್ರಾಮಾಧಿಕಾರಿಗಳ ರಿದ್ದಿಯಾತಿ ಪ್ರತಿಭಡಿಸಿ, ಹಕ್ಕುದಾರಿಕೆ ಬಿಟ್ಟುಕೊಡುವ ಗ್ರಾಮಾಧಿಕಾರಿಗಳಿಗೆ ನ್ಯಾಯವಾಗಿ ಕೊಡಬೇಕಾದ ಪರಿಹಾರವನ್ನು ಕೊಡಬೇಕೆಂದು ಒತ್ತಾಯ ಪಡಿಸಲು ನಿರ್ಣಯವು ಅಂಗೀಕೃತವಾಯಿತು.

ಜರೂರು ಪರಿಸ್ಥಿತಿ

ಕೊಲಂಬೊ 17— ಸಿಂಹಳದ ಅದ್ಯಂತ ಜರೂರು ಪರಿಸ್ಥಿತಿಯನ್ನು ಕಮಿಷನರ್ ಜನರಲ್ ಸರ್ ಗುಣತಿಲಕೆ ಘೋಷಿಸಿದರು.

★

ಹಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವತ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಷ್ಣ ಜೋಯಿಸರಿಂದ
19 ಬುಧವಾರ ಚಾತಿ ರೋಹಿಣಿ

ಭೂಕಂದಾಯದ ಮೇಲೆ ಸರ್ಚಾರ್ಜ್

ಬೆಂಗಳೂರು 17—ಭೂಕಂದಾಯದ ಮೇಲೆ ಸರ್ಚಾರ್ಜ್ ವಿಧಿಸಲು ಸರಕಾರ ನಿರ್ಧರಿಸಿರುವ, ಆ ಬಗ್ಗೆ ವಿಧೇಯಕ ವಿಷಯವು ವಿಧಾನ ಸಭೆಯಲ್ಲಿ ತಿಳಿಸಲಾಯಿತು.

ಗೊಂಡಾಲ್ ಮಹಾರಾಜರ ದಸ್ತಗಿರಿ

ಬೆಂಗಳೂರು 17—ಲಂಕ್ಷಣ ರಹಸ್ಯದ ಬಗ್ಗೆ ಗೂಢಚರ್ಯೆ ನಡೆಸಿದ ಆಪಾದನೆಗಾಗಿ, ಬೊಂಬಾಯಿಗೆ ತೆರಳಲು ವಿಮಾನಕ್ಕೆ ಹೋಗುವುದಕ್ಕೆ ಮುಂಚೆ, ಗೊಂಡಾಲಿನ ಮಾಜಿ ಮಹಾರಾಜರು ಮತ್ತು ಇನ್ನೊಬ್ಬರನ್ನು ದಸ್ತಗಿರಿ ಮಾಡಲಾಯಿತು — ಇವರು ಶುಕ್ರವಾರ ಹಿಂದೂ ಸ್ಥಾನ ವಿಮಾನ ಫ್ಯಾಕ್ಟರಿಯಲ್ಲಿ ಸೂಪರ್ ಸಾನಿಕ್ ವಿಮಾನದ ಪೂಜೆ ನಡೆದು ಹಾರುವ ಸಮಯದಲ್ಲಿ ಲಂಚಸ್ಯವಾಗಿ ನಡೆಯುತ್ತಿದ್ದಾಗ, ಇವರು ದೂರದ ಪೊದರಿನ ಹಿಂದೆ ನೀಲಿ ಬಲಯುತವಾದ ಕ್ಯಾಮರಾದಿಂದ ಈ ಎಲ್ಲ ಲಂಚಸ್ಯಗಳ ಫೋಟೋ ತೆಗೆದುಕೊಳ್ಳಲು ತೊಡಗಿದ್ದಾಗ ಸಿಕ್ಕಿಬಿದ್ದು, ಅವರ ಕ್ಯಾಮರಾವನ್ನು ವಶಪಡಿಸಿಕೊಳ್ಳಲ್ಪಟ್ಟಿತು.

ಮಂತ್ರಿಯ ನಿಧನ

ತಿರುವನಂತಪುರಂ 17— ಟ್ರಾವಂಕೂರ್ ಜನಂಲ್ ಸದ್ ಗುಣತಿಲಕೆ ಫೋಷಿಸಿದರು.

★

ಆ ಹೇಯ ಕೃತ್ಯ

ಬೆಂಗಳೂರು 17— ಕೆಲ ದಿನಗಳ ಹಿಂದೆ ಲೆಜಿಸ್ಲೇಟರು ಹೋಂನಲ್ಲಿ ನಡೆದ ಹೇಯ ಕೃತ್ಯ ಬಗ್ಗೆ ತನಿಖೆ ಮುಗಿದಿಡೆಯೇ, ಮುಖ್ಯ ಮಂತ್ರಿಗಳು ಹೇಳಿಕೆ ಕೊಡಬೇಕೇ ಎಂದು ವಿರೋಧ ಪಕ್ಷದ ಸದಸ್ಯರು ಕೇಳಿದಾಗ, ಸ್ಪೀಕರು ಶ್ರೀ ಕಂಠಿಯವರು, ತನಿಖೆ ಮುಗಿದಂತರ ಮುಖ್ಯಮಂತ್ರಿಗಳು ವಿಷಯಗಳನ್ನು ಸಭೆಗೆ ತಿಳಿಸುವರು ಎಂದರು ; ತನಿಖೆ ಇನ್ನೂ ಪೂರ್ತಿಯಾಗಿಲ್ಲವೆಂದು ಮುಖ್ಯಮಂತ್ರಿಗಳು ತಿಳಿಸಿದರು.

★

ಅಶಾದಾಯಕ ಚಿತ್ರ

ನವದೆಹಲಿ 17— ಮೂಂನೆ ಯೋಜನೆಯ ಕಡೆಯ ಹೊತ್ತಿಗೆ ಅಹಾರ ಉತ್ಪಾದನೆಯು 100 ರಿಂದ 150 ಮಿಲಿಯನ್ ಟನ್ನು ಗಳವರೆಗೆ ಹೆಚ್ಚುವುದೆಂದು ಸರಕಾರಕ್ಕೆ ಭರವಸೆಯಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಸ್ಪೀಕರಂ ನಿಧನ

ತಿರುವನಂತಪುರಂ 17—ಕೇರಳದ ಶಾಸನ ಸಭೆಯ ಸ್ಪೀಕರ್ ಕೆ ಎಂ ಸೀತಾ ರಾಮ ಸೇಬರು ಹೃದಯಸ್ತಂಭನದಿಂದ ನಿಧನರಾದರು.

ಮುಸಲ್ಮಾನ ವಿದ್ವಾಂಸರ ಸಾಹಿತ್ಯ ಸೇವೆ

ಕಳೆದ ಮೂರು ಶತಮಾನಗಳಲ್ಲಿ ಪಾರ್ಸಿ ಭಾಷೆಯಲ್ಲಿ ಮುಸಲ್ಮಾನ ವಿದ್ವಾಂಸರು ಸಂಸ್ಕೃತ ವಾಙ್ಮಯದ ಅನುಸಂಧಾನ, ಸಂಪಾದನ, ಪ್ರಕಾಶನ ಮತ್ತು ಚಿರ ನಿವಹಣೆಯನ್ನು ಅತ್ಯದ್ಭುತವಾಗಿಯೂ ಚಮತ್ಕಾರಪೂರ್ಣವಾಗಿ ಮಾಡಿರುವರು. ಅವರೆಲ್ಲರೂ ಪ್ರಶಂಸಾರ್ಹರಾಗಿರುವರು. ಮುಸಲ್ಮಾನ ಅರಸರು ಕೋಟ್ಯಂತರ ಧನವನ್ನು ವ್ಯಯಿಸಿ, ಪಾರ್ಸಿ ಭಾಷೆಯಲ್ಲಿ ಸಂಸ್ಕೃತ ಗ್ರಂಥಗಳ ಭಾಷಾಂತರವನ್ನು ಮಾಡಿಸಿರುವರು. ಅಲಂಕಾರ, ಸಾಹಿತ್ಯ, ಮಹಾಭಾರತ, ರಾಮಾಯಣ, ಉಪನಿಷತ್ತು, ಆಯುರ್ವೇದ, ಸಂಗೀತ ಕಲೆ, ಜ್ಯೋತಿಷ ನಿಮಲ ಮೊದಲಾದುವುಗಳಲ್ಲಿ ಅನೇಕ ಗ್ರಂಥಗಳನ್ನು ಯವನ ಪಂಡಿತರಿಂದ ಭಾಷಾಂತರಿಸಿ, ಪ್ರಚಾರಗೊಳಿಸಿ ಕೃತಾರ್ಥರಾಗಿರುವರು.

ಶಿರಾಜಾಮುಖ್ಯದಲ್ಲಿದ್ದ ಪ್ರಸಿದ್ಧ ಸಂಸ್ಕೃತ ಪುಸ್ತಕಾಲಯದ ಅಧ್ಯಯನ ಮಾಡಿ, ಫಿರೋಜ್ ಷಾ ತುಗ್ಲಕ್ ಬಾದಶಹನು ಅನೇಕ ಸಂಸ್ಕೃತ ಗ್ರಂಥಗಳ ಅನುವಾದವನ್ನು ಪಾರ್ಸಿ ಭಾಷೆಗೆ ಮಾಡಿರುವನು (ಇವನ ಕಾಲ ಕ್ರಿ ಶ 1351–1399) ; ಜ್ಯೋತಿಶಾಸ್ತ್ರದ ' ವಾರಾಹೀ ಸಂಹಿತಾ ' ಎಂಬ ಪ್ರಸಿದ್ಧ ಗ್ರಂಥದ ಅನುವಾದವನ್ನು ಸಹ ಮಾಡಿರುವನು ; ಅನಂತರ, ಸಿಕಂದರ ಲೋದಿಯು (ಕಾಲ ಕ್ರಿ ಶ 1488–1515) ಆಯುರ್ವೇದ ವಿಷಯಕ ಗ್ರಂಥಗಳ ಅನುವಾದವನ್ನು ಪಾರ್ಸಿ ಭಾಷೆಯಲ್ಲಿ ಮಾಡಿಸಿರುವನು ; ಈ ಗ್ರಂಥಗಳ ಅನುವಾದವನು ಮೌಲಾನಾ ಇಬ್'ನಬ್' ಬಾಸಬ್ರಾಕ್ ಮಹೋದಯನು ಮಾಡಿರುವನು.

ಮೊಗಲು ಬಾದಶಹರು ಕೂಡಾ ಸಂಸ್ಕೃತ ಸಾಹಿತ್ಯದ ಅನುವಾದ ಮತ್ತು ಸ್ವಚ್ಛೀಕರಣಕಾರ್ಯವನ್ನು ಅದ್ಭುತವಾಗಿ ಹಾಗೂ ಉತ್ಸಾಹಪೂರ್ಣವಾಗಿ ಮಾಡಿರುವರು ಅಂತಹವರಲ್ಲಿ ಅಕ್ಬರನು ಶ್ರೇಷ್ಠನು : ಅವನು ಸಹ ಸಂಸ್ಕೃತ ಸಾಹಿತ್ಯ, ಸಂಗೀತ, ಚಿತ್ರಕಲೆಗಳಲ್ಲಿ ಮಹತ್ಕಾರ್ಯಗಳನ್ನು ಮಾಡಿರುವನು ; ಸರ್ವಧರ್ಮ ಸಮನ್ವಯಾರ್ಥವಾಗಿ, ' ದೀನ್ ಇಲಾಹೀ ' ಎಂಬ ಧರ್ಮವನ್ನು ಸ್ಥಾಪಿಸಿದನು ; ಅಕ್ಬರನ ದರ್ಬಾರಿನಲ್ಲಿ ಫೈಜಿ ಅಬ್ದುಲ್ ಫಜಲ್ ಬದಯೂನೀ, ರಾಜಾ ತೋದರಮಲ್, ರಾಜಾ ಮಾನಸಿಂಹ, ಬೀರಬಲ್ ಮೊದಲಾದ ನವರತ್ನಗಳು ಇದ್ದರು : ಕವಿವರ ಫೈಜೀ ಅಬ್ದುಲ್ ಫಜಲರು ಕಾಶಿಗೆ ಬಂದು ಸೆಲಸಿ ಸಂಸ್ಕೃತ ಸಾಹಿತ್ಯದ ಅಧ್ಯಯನವನ್ನು ಮಾಡಿದ್ದರು ; ಅಕ್ಬರನ ಸಭೆಯಲ್ಲಿ ಫೈಜಿ ಅಬುಲ್ ಫಜಲರು ಸಂಸ್ಕೃತ, ಅರಬೀ, ಪಾರ್ಸಿ ಭಾಷೆಯ ಪಂಡಿತೋತ್ತಮರಾಗಿದ್ದರು : ಫೈಜಿ ಕವಿಗಳು ಅತಿ ಮೇಧಾವೀ, ಪ್ರತಿಭಾಶಾಲೀ ಮತ್ತು ಪಾರ್ಮಿಕ ಕವಿಗಳಾಗಿದ್ದರು ; ಪಾರ್ಸಿ ಭಾಷೆಯಲ್ಲಿ ಅವರು ಶ್ರೀಮದ್ಭಗವದ್ಗೀತೆಯ ಅತಿಮನೋಹರ, ಮಧುರಲಲಿತ ಹಾಗೂ ಭಕ್ತಿಭಾವಪೂರ್ಣವಾದ ಅನುವಾದವನ್ನು ಮಾಡಿರುವರು. ಕವಿಶ್ರೇಷ್ಠ ಫೈಜಿಯವರು ಸಂಸ್ಕೃತದಲ್ಲಿರುವ ' ನೈಷಧ ಚರಿತ ' ವನ್ನು ' ನಲ ದಮನ್ ' ಎಂಬುದಾಗಿ ಅನುವಾದ ಮಾಡಿ, ಅದಿಂದು ಪಾರ್ಸಿಭಾಷೆಯ ಮಹಾಕಾವ್ಯವಾಗಿದೆ ; ಪಾರ್ಸಿ ದೇಶದಲ್ಲಿ ಲೋಕಪ್ರಸಿದ್ಧವಾಗಿದೆ.

SHAKTI SUDHA

A Superb Tonic

Edited, Printed & Published by the Proprietor Dharmacharya Nirata M. S. Krishna Rao, at the Satyavadi Press Saraswathipuram, Mysore-4.

★ SEE TO-DAY ★

At Woodlands : Glorious 2nd Week

Never before on the Screen— The glories, The Triumphs, the Conquests of the World's mightiest man !

HERCULES UNCHAINED

Steve Reeves as Hercules — — in Eastman Color

See War of Chariots, Arena of Tigers, Court of Lover, Temptress Lydia, Contest of Giants, Combat of Kings

ಆಪೆರಾ— ಜಯಪ್ರದ 2 ನೇ ವಾರ

.... ಪ್ರತಿ ಸಂಸಾರವೂ ನೋಡಬೇಕಾದ ಸಾಮಾಜಿಕ ಚಿತ್ರ ....

ಉತ್ತಮಪುತ್ರ ರತ್ನಂ (ತಮಿಳು)

.... 20–4–61 ರಿಂದ ....

ಆಪ್ತ ಘರ್ [ಹಿಂದಿ]



ವಿದೇಶದಿಂದ ಟ್ರಸ್ಟಿಬೋರ್ಡಿನವರು ಅನ್ನ ವಿಮೋಚನೆಯಲ್ಲಿ ಅಲ್ಪಾದಾಯ ಗುಂಪಿನ ವಸತಿ ಯೋಜನೆಯಲ್ಲಿ ಕಟ್ಟಿಸಿರುವ ಮನೆಗಳು